ತುಂಬುವುದಕ್ಕೆ ಈಗಾಗಲೇ ನಿರ್ದೇಶಕರ ಮಟ್ಟದಲ್ಲಿ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆದಷ್ಟು ಬೇಗ ಅವುಗಳನ್ನು ತುಂಬುತ್ತೇವೆ. ಮತ್ತು ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೇ ಅಧಿಕಾರವನ್ನು ಕೊಟ್ಟಿದ್ದು, ಚುನಾವಣೆ ಇದ್ದುದರಿಂದ ಸ್ವಲ್ಪ ಒಂದು ತಿಂಗಳು ತಡವಾಗಿದೆ. ಮತ್ತೆ ತಕ್ಷಣ ಅದನ್ನು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಸಮಾಧಾನ ಆಯಿತೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಅಧ್ಯಕ್ಷರೇ, ಖಾಲಿ ಇರುವ ಹುದ್ದೆಗಳನ್ನು ತುಂಬುವುದು ಇದು ಎರಡು ವರ್ಷಗಳಿಂದ ನಡೆಯುತ್ತಲೇ ಇದೆ. ಇವತ್ತು ಆಗುತ್ತದೆ, ನಾಳೆ ಆಗುತ್ತದೆ ಎಂದು ಹೇಳಿ ಅದು ಮುಂದಕ್ಕೆ ಹೋಗುತ್ತಲೇ ಇದೆ. ಈವಾಗ ಒಂದು ತಿಂಗಳು ಎಂದು ಹೇಳಿದ್ದೀರಿ. ಆದ್ದರಿಂದ ಅದು ಓ.ಕೆ.ಆದರೆ ಈ ಆನವಟ್ಟಿ ಆಸ್ಪತ್ರೆಯನ್ನು ಅಪ್‌ಗ್ರೇಡೇಶನ್ ಮಾಡುವ ವಿಚಾರದಲ್ಲಿ ಅಲ್ಲಿ ಬೇರೆ ಏನೂ ಇಲ್ಲ. ನೀವು ಪರ್ಮಿಶನ್ ಕೊಟ್ಟರೆ, ಉಳಿದಿರತೆಕ್ಕಂಥ ಸವಲತ್ತುಗಳನ್ನು ಕೊಟ್ಟರೆ ಸಾಕು. ಕಟ್ಟಡ ಆಗುವುದು ಅಥವಾ ಪರಿಶೀಲನೆ ಮಾಡತಕ್ಕಂಥಾದ್ದು ಯಾವುದೂ ಅವಶ್ಯಕತೆ ಇಲ್ಲ. ಏಕೆಂದರೆ ಎಲ್ಲ ಪರಿಶೀಲನೆ ಮಾಡಿಬಿಟ್ಟು ಅಲ್ಲಿಂದ ಲೆಟರ್ ಕೂಡ ಬಂದಾಗಿದೆ. ತಾವು ಅದರ ಬಗ್ಗೆ ಸ್ವಲ್ಪ ಗಮನ ಕೊಟ್ಟರೆ ಬಹಳ ಉಪಯೋಗವಾಗುತ್ತದೆ.

ಡಾ॥ ಹೆಚ್.ಸಿ.ಮಹದೇವಪ್ಪ: ಅದನ್ನು ನೋಡುತ್ತೇನೆ.

ಬೆಂಗಳೂರು ನಗರದಲ್ಲಿ ಪೂರ್ವ ಪ್ರೈಮರಿ ಹಾಗೂ ಪ್ರೈಮರಿ ತರಗತಿಗಳ ಪ್ರವೇಶಕ್ಕಾಗಿ ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುತ್ತಿರುವುದು.

21(72)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪೂರ್ವ ಪ್ರೈಮರಿ ಹಾಗೂ ಪ್ರೈಮರಿ ತರಗತಿಗಳ ಪ್ರವೇಶಕ್ಕಾಗಿ ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಳೆಯ ಮಕ್ಕಳ ಮೇಲೆ ಆಗತಕ್ಕ ದುಷ್ಪರಿಣಾಮವನ್ನು ನಿವಾರಿಸಲು ಸರ್ಕಾರ ಇಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವುದನ್ನು ನಿಷೇಧಿಸುತ್ತದೆಯೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾ ರೆಡ್ಡಿ: ಅಧ್ಯಕ್ಷರೆ, ಮಾನ್ಯ ಗೋವಿಂದೇಗೌಡರು ಹಿರಿಯ ಸಚಿವರು, ಶಿಕ್ಷಣ ಇಲಾಖೆಯಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೆಂದು ನಾವು ಭಾವಿಸಿಕೊಂಡಿದ್ದೇವೆ. ನನ್ನ ಪ್ರಶ್ನೆ ಏನೆಂದರೆ (ಅ) ದಲ್ಲಿ ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳುತ್ತಾರೆ. ಇದಕ್ಕೆ ನಾನು ಸರ್ಕಾರ ಇದೆಯೇ? ವಿದ್ಯಾ ಇಲಾಖೆ ಇದೆಯೇ? ಇದಕ್ಕೆ ಒಬ್ಬ ಮಂತ್ರಿ ಇದ್ದಾರೆಯೇ? ಎಂದು ನಾನು ಪ್ರಶ್ನೆ ಕೇಳಬೇಕಾಗುತ್ತದೆ. ಈ ಸದನದಲ್ಲಿ ನಾನು ಕೇಳಿರುವ ಪ್ರಶ್ನೆಯನ್ನು ಯಾರಾದರೂ ತಪ್ಪು ಎಂದು ಹೇಳಿದರೆ ನಾನು ನಿಮ್ಮ ಉತ್ತರವನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಎಲ್ಲರಿಗೂ ಈ ವಿಚಾರ ಗೊತ್ತಿರುವಂಥದ್ದೇ ಆಗಿದೆ. ಎಲ್ಲಾ ಖಾಸಗಿ ಶಾಲೆಗಳಲ್ಲಿ ಈ ರೀತಿ ಮಾಡುತ್ತಾರೆ, ಸರ್ಕಾರಿ ಶಾಲೆಗಳಲ್ಲಿ ಮಾಡುವುದಿಲ್ಲ. ಈ ವಿಚಾರ ಮಾನ್ಯ ಸಚಿವರಿಗೆ ಗೊತ್ತಿಲ್ಲ ಎಂದರೆ ನಾನು ಏನನ್ನು ಕೇಳಲಿ?

ಅಧ್ಯಕ್ಷರು: ರೆಡ್ಡಿಯವರೇ ಇಲ್ಲಿ ಏನಾಗುತ್ತದೆ ಎಂದರೆ, ನೀವು ಹೇಳಿರತಕ್ಕಂಥದ್ದು ನಿಜ. ಇದು ನಡೆಯುತ್ತಿರುವುದೂ ನಿಜ. ಆದರೆ ಅಧಿಕಾರಿಗಳು ಇಲ್ಲ ಎಂದು ಬರೆದು ಕೊಟ್ಟರೆ ಅವರು ಇಲ್ಲ ಎಂದು ಹೇಳುತ್ತಾರೆ.

ಶ್ರೀ ರಾಮಲಿಂಗಾರೆಡ್ಡಿ: ಅದಕ್ಕೆ ನಾನು ಅವರಿಗೆ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಈ ಮೊದಲೇ ಹೇಳಿದ್ದೇನೆ. ಆದರೆ ಅಧಿಕಾರಿಗಳು ಬರೆದುಕೊಟ್ಟಿರುವ ಉತ್ತರ ನನಗೆ ಏಕೆ ಬೇಕಾಗಿದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಅಧ್ಯಕ್ಷರೇ, ಅವರ ಪ್ರಶ್ನೆ ಏನು ಇದೆ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇಲ್ಲಿ ನನ್ನ ಪ್ರಶ್ನೆ ಇಷ್ಟೇ. ಯಾವುದಾದರೂ ಒಂದು ಕಾನೂನಿಗೆ ಇಲ್ಲಿ ಅದರ ವಿರುದ್ಧವಾದ ಕ್ರಮ ನಡೆಯುತ್ತಿದೆ ಎಂದು ಬರವಣಿಗೆಯಲ್ಲಿ ದೂರನ್ನು ಕೊಡತಕ್ಕಂಥ ವ್ಯವಸ್ಥೆ ನಮ್ಮ ಈ ಪ್ರಜಾಪ್ರಭುತ್ವದಲ್ಲಿ ಇಲ್ಲವೇ? ಎಂದು ನಾನು ಕೇಳಬೇಕಾಗುತ್ತದೆ. ಇಲ್ಲಿ ಅಂತೆಕಂತೆಗಳು ಬೇಡ, ನಿಜ ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನಗೆ ಬರವಣಿಗೆಯಲ್ಲಿ ದೂರನ್ನು ಕೊಡಿ ಎಂದು ನಾನು ಅನೇಕ ಸಲ ಹೇಳಿದ್ದೇನೆ. ನೀವು ಆ ರೀತಿ ದೂರನ್ನು ಕೊಟ್ಟಿದ್ದೇ ಆದರೆ ನಾವು ಕೂಡಲೇ ಕ್ರಮ ಕೈಗೊಳ್ಳುತ್ತೇವೆ. ಇವತ್ತಿನ ದಿವಸ ಎಲ್‌ಕೆಜಿ, ಯುಕೆಜಿ ಮಕ್ಕಳಲ್ಲದೇ ಅವರ ಪೋಷಕರಿಗೂ ಕೂಡ ಇಂಟರ್‌ವ್ಯೂ ಮಾಡತಕ್ಕಂಥದ್ದು ಇಡೀ ರಾಜಾದ್ಯಂತ ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರವಾಗಿದೆ. ಇಂಥ ಶಾಲೆಯಲ್ಲಿ ಈ ರೀತಿ ಮಾಡುತ್ತಾರೆ ಎಂದು ಬರವಣಿಗೆಯಲ್ಲಿ ದೂರು ಕೊಟ್ಟರೆ ಅವರು ನನ್ನ ಸಹೋದರರಾದರೂ ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ನಾವು ಏಕೆ ದೂರನ್ನು ಬರೆದು ಕೊಡಬೇಕು? ಹಾಗಾದರೆ ನಿಮ್ಮ ವಿದ್ಯಾ ಇಲಾಖೆ, ಅಧಿಕಾರಿಗಳು, ಸರ್ಕಾರ ಏತಕ್ಕಾಗಿ ಬೇಕು? ಏಕೆ ನೀವು ಇಷ್ಟೊಂದು ಅಧಿಕಾರಿಗಳನ್ನು ಇಟ್ಟುಕೊಂಡಿದ್ದೀರಿ? ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುವುದಾದರೆ, ಇದೇ ಮಂತ್ರಿಗಳು ಒಂದುಸಾರಿ ನಮ್ಮ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಶಾಲೆಗಳಿಗೆ ಹೋಗಿ ಅಕ್ರಮ ನಡೆಯತಕ್ಕಂಥದ್ದನ್ನು ವಿಚಾರಿಸಿದರು. ಅದರ ಪರಿಣಾಮ ಏನಾಯಿತು ಎಂದರೆ ಅವರು ಹೋದ ನಂತರ ಡೊನೇಷನ್ 5,000-00 ರೂಪಾಯಿ ಜಾಸ್ತಿಯಾಯಿತು.

ಅಧ್ಯಕ್ಷರು: ಮಾನ್ಯ ಗೋವಿಂದೇಗೌಡರೆ, ಮಾನ್ಯ ರಾಮಲಿಂಗಾ ರೆಡ್ಡಿಯವರ ಪ್ರಶ್ನೆಯ ಮೂಲ ಉದ್ದೇಶ ಏನೆಂದರೆ, ಕೆಳಹಂತದಲ್ಲಿರತಕ್ಕಂಥ ಸರ್ಕಾರಿ ಅಧಿಕಾರಿಗಳು ಸ್ವಯಂ ಪ್ರೇರಿತರಾಗಿ ಇಂತಹ ಕ್ರಮಗಳನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು ಎಂದು. ಅದನ್ನು ಅಧಿಕಾರಿಗಳು ಮಾಡುವುದಿಲ್ಲ. ಅದರ ಬದಲಾಗಿ ಅವರು ಈ ರೀತಿ ಉತ್ತರ ನಿಮಗೆ ಒದಗಿಸುತ್ತಾರೆ ಎನ್ನತಕ್ಕಂಥದ್ದು ಅವರ ಮಾತು. ಅಲ್ವೇ? I hope that is what you meant.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಉತ್ತರದ ಬಗ್ಗೆ ನನಗೆ ತೃಪ್ತಿ ಇದೆ ಎಂದು ನಾನು ಹೇಳಲಿಲ್ಲ.

ಅಧ್ಯಕ್ಷರು: ದೂರನ್ನು ನಿರೀಕ್ಷೆ ಮಾಡತಕ್ಕಂಥದ್ದು ಈ ವ್ಯವಸ್ಥೆಯಲ್ಲಿ ತಪ್ಪಾಗುತ್ತದೆ. ಏಕೆಂದರೆ ಯಾವ ಪೋಷಕರು ಈ ರೀತಿ ದೂರನ್ನು ಕೊಟ್ಟು ಅದನ್ನು ಪರ್ಸ್ಯೂ ಮಾಡುವುದಕ್ಕೆ ಆಗುವುದಿಲ್ಲ. The officers should evince more interest in this.

ಶ್ರೀ ಎನ್.ರಾಜಣ್ಣ: ಬೆಂಗಳೂರಿನಲ್ಲಿ ಕೆಲವು ಖಾಸಗಿ ಶಾಲೆಗಳಲ್ಲಿ ಇಂಟರ್‌ವ್ಯೂ ತೆಗೆದುಕೊಳ್ಳುತ್ತಾರೆ. ನಾನು ಇದರ ಬಗ್ಗೆ ವಿರೋಧ ಮಾಡುತ್ತಿಲ್ಲ. ಕೆಲವರು ಗ್ರಾಂಟ್ ತೆಗೆದುಕೊಳ್ಳುವುದಿಲ್ಲ. ಸ್ವಂತ ಮ್ಯಾನೇಜ್‌ಮೆಂಟ್‌ನಿಂದ ಶಾಲೆಗಳನ್ನು ನಡೆಸುತ್ತಿರುತ್ತಾರೆ. ಅವರು, ಮಕ್ಕಳು ಪರ್‌ಫೆಕ್ಟಾಗಿ ಇರಬೇಕು ಎನ್ನುವ ಕಾರಣಕ್ಕಾಗಿ ತಂದೆ-ತಾಯಿಗಳನ್ನು ಇಂಟರ್‌ವ್ಯೂ ತೆಗೆದುಕೊಳ್ಳುತ್ತಾರೆ. Whether mother and father have got the capacity to send the child regularly.

ಅಧ್ಯಕ್ಷರು: ಕೆಪಾಸಿಟಿ ಅಂದರೆ ಏನು?

ಶ್ರೀ ಎನ್.ರಾಜಣ್ಣ: ಅವರು, ಮಕ್ಕಳು ಸರಿಯಾಗಿ ಇರಬೇಕು.

ಅಧ್ಯಕ್ಷರು: ಬೆಂಗಳೂರಿನಲ್ಲಿ ಚರಂಡಿ ತೊಳೆಯುವವನು ಒಬ್ಬ ಸ್ಕ್ಯಾವೆಂಜರ್ ಅವನು ತನ್ನ ಮಗನನ್ನು ಕಾನವೆಂಟ್‌ಗೆ ಸೇರಿಸಬೇಕೆಂದು ಇಷ್ಟಪಡುತ್ತಾನೆ. ಸ್ಕ್ಯಾವೆಂಜರ್ ಮಗ

ಎಂದು ಹೇಳಿದರೆ ಅವರು ಸೀಟು ಕೊಡುತ್ತಾರೋ? ಹಾಗಾದರೆ ಎಲ್ಲಾ ಅನುಕೂಲಸ್ಥರೇ ಹೋಗಿ ಓದಿಕೊಳ್ಳಲಿ. ಅದು ಯಾರೋ ಪೂರ್ಣಪ್ರಜ್ಞ ಎಂದು ಶಾಲೆ ನಡೆಸುತ್ತಾರಲ್ಲ. ತಾವು ಕುಳಿತುಕೊಳ್ಳಿ ಸಾಕು, ನಿಮಗೆ ಇದರ ಬಗ್ಗೆ ಐಡಿಯಾ ಇಲ್ಲ. You have no idea. These people are swindling in Bangalore. You do not know about it. Blood boils when you think of them. Are they schools? Can you call them as institutions? ಅವರೇನು ಮನುಷ್ಯರೆ? ನಾವು ಅಸಹಾಯಕರಂತೆ ನೋಡುತ್ತಾ ಕುಳಿತ್ತಿದ್ದೇವೆ ಅಷ್ಟೆ. ಮಾನ್ಯ ಗಂಗಹನುಮಯ್ಯನವರೆ, ತಾವು ಪ್ರಶ್ನೆ ಕೇಳಿ. ಆ ಪೂರ್ಣಪ್ರಜ್ಞ ಶಾಲೆಯವನು ಒಬ್ಬರಿಗೆ ಸೀಟು ಕೊಡಲಿಕ್ಕೆ ಎರಡು ಲಕ್ಷ ಕೇಳುತ್ತಾನೆ ಯಾರು ಅವನು ಸ್ವಾಮಿ?

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗುತ್ತದೆ ಎಂದರೆ, ನಾವು ಪ್ರಶ್ನೆ ಕೇಳುವುದು ಮಂತ್ರಿಗಳು ಉತ್ತರ ಹೇಳುವುದು, ಇದು ಮುಗಿಯದ ಕಥೆ. ಇದರ ಬಗ್ಗೆ ಸಮಗ್ರವಾದ ಚಿಂತನೆ ಮಾಡಿ, ಇದನ್ನು ರೆಗ್ಯೂಲೇಟ್ ಮಾಡುವುದಕ್ಕೆ ಏನಾದರೂ ಒಂದು ಕಾನೂನು ಮಾಡಬೇಕು.

MR. SPEAKER: That is exactly my anguish. Besides being a Speaker, I am a member of the society. ನನ್ನನ್ನು ನಾನು ಎಷ್ಟು ರೆಸ್ಟ್ರೈನ್ ಮಾಡಿಕೊಳ್ಳಬೇಕು. ಸ್ವಲ್ಪ ಡಿಗ್ನಿಫೈಡಾಗಿ ಇರಬೇಕೆಂದರೂ ಕೂಡ ನನ್ನ ಮೂಲ ನೆನಪಾಗುತ್ತದೆ. ಇವೆಲ್ಲವನ್ನೂ ತಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಶಿಕ್ಷಣದ ಹೆಸರಿನಲ್ಲಿ, ಶಾಲೆಗಳ ಹೆಸರಿನಲ್ಲಿ ಇವರು ಹಗಲು ದರೋಡೆ ಮಾಡುತ್ತಿದ್ದಾರೆ. ಪ್ರಶ್ನೋತ್ತರ ಕೇವಲ ಮಂತ್ರಿಗಳಿಗೆ ಮತ್ತು ಸದಸ್ಯರಿಗೆ ಸಂಬಂಧಪಟ್ಟಿದ್ದಲ್ಲ. ಇದು ನಮ್ಮ ಎಲ್ಲರ ಪ್ರತಿನಿತ್ಯದ ಜೀವನಕ್ಕೆ ಸಂಬಂಧಪಟ್ಟಿದ್ದು. ಇಷ್ಟೆಲ್ಲಾ ಈ ವ್ಯವಸ್ಥೆ ಇದ್ದರೂ ನಾವೆಲ್ಲ ಎಷ್ಟು ಅಸಹಾಯಕರಾಗಿದ್ದೇವೆ. ಅವರು ವಿರಾಜಿಸುತ್ತಿದ್ದರೆ ಅವರ ಮುಂದೆ ನಾವು ಷಂಡರಂತೆ ನಿಂತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಇದು ಒಂದು ರೀತಿಯಲ್ಲಿ ಹಗಲು ದರೋಡೆ ನಡೆಯುತ್ತಿದೆ. ಇದರ ಬಗ್ಗೆ ಬೇರೆ ಮಾತೇ ಇಲ್ಲ. ಗೋವಿಂದೇಗೌಡರಲ್ಲ ಇನ್ನು ಒಂದು ನೂರು ಜನ ಬಂದರೂ ಕೂಡ ಇದನ್ನು ಸರಿಪಡಿಸುವುದಕ್ಕೆ ಆಗುತ್ತಿಲ್ಲ. ನೀವು ಮಾಡುತ್ತೀರಿ ಎನ್ನುವ ನಂಬಿಕೆ ಇತ್ತು. ಬಹುಶಃ ನಿಮ್ಮ ವ್ಯವಸ್ಥೆ ಕೂಡ ಕುಸಿದು ಬಿದ್ದಿದೆ ಎಂದು ಹೇಳಬೇಕಾಗಿದೆ.

ಮಧುಗಿರಿಯಲ್ಲಿ ಸರ್ಕಾರಿ ಪದವಿ ಕಾಲೇಜಿನ ಅವಶ್ಯಕತೆ